1950 Kannada - Patient_Edu_Booklet - (V) 15-2-17

# ನಿಮ್ಮ ಮಂಡಿನೋವು ನಿಮ್ಮ ದಿನಚರಿಯನ್ನು ಬಾಧಿಸುತ್ತಿದೆಯೇ?



**ನಿಮ್ಮ ವೈದ್ಯರು ನೀವು ಸಂಚಾರವನ್ನು ಮತ್ತೆ ಪಡೆದು,**
**ಸಾಧಾರಣ ಜೀವನವನ್ನು ನಡೆಸಲು ಸಹಕರಿಸುತ್ತಿದ್ದಾರೆಯೇ ?**

*ಹೆಚ್ಚಿನ ಮಾಹಿತಿಗಾಗಿ ಓದಿ...*



ರೋಗಿಗೆ ತಿಳುವಳಿಕೆಯ ಕಿರುಹೊತ್ತಿಗೆ

# ಕೀಲುನೋವು & ಪೂರ್ತಿ ಮೊಣಕಾಲು ಬದಲಾವಣೆಯ ಶಸ್ತ್ರ ಚಿಕಿತ್ಸೆ





ಕೀಲು ನೋವುಗಳಲ್ಲಿ ಅತಿ ಮುಖ್ಯ ಲಕ್ಷಣವಾದ ಮಂಡಿ ನೋವು ನಿಮ್ಮ ನಡೆಯನ್ನು ಸ್ಥಗಿತಗೊಳಿಸಿ, ನಿಮ್ಮ ದಿನಚರಿಯ ಕಾರ್ಯಾಚರಣೆಯನ್ನು ಬದಲಾಯಿಸುತ್ತದೆ.

ಇತ್ತೀಚಿನ ಪೂರ್ತಿ ಮೊಣಕಾಲು ಬದಲಾವಣೆಯ ಶಸ್ತ್ರ ಚಿಕಿತ್ಸೆ (TKR) ನಿಮ್ಮ ಮಂಡಿಯಲ್ಲಿಯ ಕಾರ್ಯಾಚರಣೆಯನ್ನು ಪೂರ್ವಸ್ಥಿತಿಗೆ ತಂದು, ನೀವು ನಿಮ್ಮ ದಿನಚರಿಯನ್ನು ಸುಲಭವಾಗಿ ಮುಂದುವರೆಸಲು ಬೇಕಾಗುವ ಮಂಡಿ ಬಗ್ಗಿಸುವುದಂಥಾ ಕೆಲಸಗಳು ಸುಲಭವಾಗಲು ಸಹಕರಿಸುತ್ತದೆ.

ಈ ಕಿರುಹೊತ್ತಿಗೆ ನೀವು ಕೀಲುನೋವನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು, ಉಪಯೋಗಕರವಾದ ಸಮಾಚಾರವನ್ನು ನೀಡಿ ನಿಮಗೆ BUECHEL-PAPPAS ಪೂರ್ತಿ ಮೊಣಕಾಲು ಬದಲಾವಣೆಯ ಶಸ್ತ್ರ ಚಿಕಿತ್ಸೆಯ ಹಿನ್ನೆಲೆಯನ್ನು ನಿಮ್ಮ ಮೊಣಕಾಲು ಮತ್ತೆ ಹೇಗೆ ಕೆಲಸಮಾಡಲು ಅಣಿಯಾಗುತ್ತದೆ ಎನ್ನುವುದನ್ನು ತಿಳಿಸುತ್ತದೆ.

ಮಂಡಿ ನೋವು




## ಮಂಡಿ ನೋವೆಂದರೆ ಏನು?

ವಿಶ್ವಾದ್ಯಂತ ಇರುವ ಹೆಚ್ಚಿನ ವೈದ್ಯ ಪರಿಸ್ಥಿತಿಗಳಲ್ಲಿ ಲಕ್ಷಾಂತರ ಜನರನ್ನು ಬಾಧಿಸುತ್ತಿರುವ 100ಕ್ಕಿಂತ ಹೆಚ್ಚಿನ ರೋಗ ಕಾರಣಗಳಲ್ಲಿ ಒಂದು ಈ ಮಂಡಿ ನೋವು (ಆರ್ತ್ರಿರಿಟೀಸ್). ಆದರೆ ಇವುಗಳಲ್ಲಿ 50 ವರ್ಷಕ್ಕಿಂತ ಹೆಚ್ಚಿನವರಲ್ಲಿ ಸಾಧಾರಣವಾಗಿ ಕಂಡುಬರುವ ಮಂಡಿನೋವೇ ಆಸ್ಟಿಯೋಆರ್ತ್ರಿರಿಟೀಸ್.

## ಆಸ್ಟಿಯೋ ಆರ್ತ್ರಿರಿಟೀಸ್ ಎಂದರೆ ಏನು?

ಆಸ್ಟಿಯೋ ಆರ್ತ್ರಿರಿಟೀಸ್ ಎಂದರೆ ವೃದುವಾದ ಅಸ್ಥಿ (ಎಲುಬುಗಳ ಕೊನೆಯಲ್ಲಿದ್ದು, ಕೀಲುಗಳ ನಡುವೆ ದಿಂಬಿನಂತಿದ್ದು ಎಲುಬುಗಳು ಉಜ್ಜಿಕೊಳ್ಳದಂತೆ, ವೃದುವಾದ ಚಲನೆಗೆ ಸಹಕರಿಸುವ ಪದಾರ್ಥ)ಯ ಕುಸಿತವೆಂದರ್ಥ. ಎಲುಬುಗಳು ಒಂದನ್ನು ಒಂದು ಉಜ್ಜಿಕೊಂಡಾಗ ಈ ವೃದುವಾದ ಅಸ್ಥಿ ಅಥವಾ ಕಾರ್ಟಿಲೇಜ್ ಕ್ಷೀಣಿಸುತ್ತದೆ. ಇದರಿಂದ ಆಯಾ ಭಾಗಗಳು ಸೆಟೆದುಕೊಂಡು ನೋವುಂಟಾಗುತ್ತದೆ. ಆ ಆಸ್ಟಿಯೋ ಪೋರೋಸಿಸ್ ಲಿಗಮೆಂಟ್ಸ್(ಒಂದು ಕೀಲುವಿನಲ್ಲಿ ಎರಡು ಎಲುಬುಗಳನ್ನು ಒಂದಾಗಿಸುವ ಟಿಷ್ಯೂಗಳು), ಮೆನಿಸಿ (ಒಂದು ಕೀಲಿನಲ್ಲಿರುವ ಸಂದಿಯನ್ನು ಬೇರ್ಪಡಿಸುವ ನಿರ್ಮಾಣ) ಹಾಗೂ ಸ್ನಾಯುಗಳಿಗೆ ಹಾನಿ ಉಂಟು ಮಾಡುತ್ತದೆ. ಕಾಲ ಕಳೆಯುವಾಗ ಆಸ್ಟಿಯೋಆರ್ತ್ರಿರಿಟೀಸ್, ಮಂಡಿಯನ್ನು ಬದಲಾಯಿಸುವ ಸ್ಥಿತಿಯನ್ನು ತರುತ್ತದೆ.




## ಸಾಧಾರಣವಾಗಿ ಆಸ್ಟಿಯೋಆರ್ತ್ರಿರಿಟೀಸ್ ಬಾಧಿಸುವ ಕೀಲುಗಳು ಯಾವುವು?

ಮುಖ್ಯವಾಗಿ ಈ ಆಸ್ಟಿಯೋಆರ್ತ್ರಿರಿಟೀಸ್ ಮಂಡಿಗಳಲ್ಲಿ ಉಂಟಾಗುತ್ತದೆ. ಕಡಿಮೆ ಪಕ್ಷ ಎಂದರೂ ಅದು ಸೊಂಟವನ್ನೂ, ತೋಳುಗಳನ್ನೂ ಬಾಧಿಸುತ್ತದೆ. ಆಸ್ಟಿಯೋಆರ್ತ್ರಿರಿಟೀಸ್ ಅಪರೂಪವಾಗಿ ಬೇರೇ ಕೀಲುಗಳನ್ನೂ ಬಾಧಿಸುತ್ತದೆ. ಅದರ ಫಲವಾಗಿ ಗಾಯ ಅಥವಾ ಅಸಾಧಾರಣವಾದ ಶಾರೀರಕ ಒತ್ತಡ.

# ಮಂಡಿಯ ಆಸ್ಟಿಯೋಆರ್ತ್ರಿರಿಟೀಸ್

## ಮಂಡಿಯ ಆಸ್ಟಿಯೋಆರ್ತ್ರಿರಿಟೀಸ್‌ನ ಸಂಕೇತಗಳು, ಲಕ್ಷಣಗಳು ಏನು?



ಸಾಧಾರಣವಾಗಿ ಆಸ್ಟಿಯೋಆರ್ತ್ರಿರಿಟೀಸ್‌ನಿಂದ ಬಾಧಿಸಲ್ಪಡುವ ಕೀಲುಗಳು ಬೆಳಗಿನ ಸಮಯದಲ್ಲಿ ಸೆಟೆದುಕೊಂಡು ನೋವುಂಟುಮಾಡುತ್ತವೆ. ಅಥವಾ ಅವುಗಳನ್ನು ತೀವ್ರವಾಗಿ ಉಪಯೋಗಿಸಿದ ನಂತರ. ಹೆಚ್ಚಿನ ಸಮಯ ಅವುಗಳನ್ನು ಬಳಸದಿದ್ದರೆ ಅಥವಾ ಅವು ಊದಿಕೊಂಡಿದ್ದರೆ ಕೂಡಾ ಅವು

ಸೆಟೆದುಕೊಳ್ಳುತ್ತವೆ. ಆಗ ಆರ್ತರಿಟಿಕ್ ಮಂಡಿನಲ್ಲಿ ಒಂದು ಬೆಚ್ಚನೆಯ ಅನುಭೂತಿ ಉಂಟಾಗುತ್ತದೆ. ಆಗ ಅವರಿಗೆ ನಡೆಯುವಾಗ, ಮೆಟ್ಟಿಲನ್ನು ಹತ್ತುವಾಗ, ಕುರ್ಚಿಯಲ್ಲಿ, ಕಾರ್‌ಗಳಲ್ಲಿ ಕುಳಿತುಕೊಳ್ಳುವಾಗ ನೋವುಂಟಾಗುತ್ತದೆ.

## ವಯಸ್ಸಿಗೂ, ಆಸ್ಟಿಯೋಆರ್ತರಿಟೀಸ್‌ಗೂ ಸಂಬಂಧವಿದೆಯೇ?

ಇರಬಹುದು, ಆದರೆ ಖಂಡಿತವಾಗಿ ಅಲ್ಲ. ವಾಸ್ತವವಾಗಿ ಎರಡು ಬಗೆಯ ಆಸ್ಟಿಯೋಆರ್ತರಿಟೀಸ್–ಪ್ರೈಮರೀ ಹಾಗೂ ಸೆಕೆಂಡರೀಗಳಿವೆ. ಸಾಧಾರಣವಾಗಿ ಪ್ರೈಮರೀ ಆಸ್ಟಿಯೋ ಆರ್ತರಿಟೀಸ್ 50 ವರ್ಷಗಳಿಗಿಂತ ಹೆಚ್ಚಿನ ವಯಸ್ಸಾದವರಿಗೆ ಹಾಗೂ ಎಲುಬುಗಳು ಸವೆಯುವುದರಿಂದ ಉಂಟಾಗುತ್ತದೆ. ಸೆಕಂಡರೀ ಆಸ್ಟಿಯೋ ಆರ್ತರಿಟೀಸ್ ಚಿಕ್ಕವಯಸ್ಸಿನಲ್ಲೇ ಅಂದರೆ ಗಾಯ ಅಥವಾ ಸ್ಥೂಲಕಾಯಗಳಿಂದಾಗಿ – 10 ವರ್ಷ ಮುಂಚಿತವಾಗಿಯೇ ಬರಬಹುದು.

## ಆಸ್ಟಿಯೋಆರ್ತರಿಟೀಸ್ ನಿಮ್ಮ ಜೀವನ ವಿಧಾನವನ್ನು ಹೇಗೆ ಬಾಧಿಸುತ್ತದೆ?



ಆರ್ತರಿಟಿಕ್ ಮಂಡಿಯಲ್ಲಿ ಉಂಟಾಗುವ ನೋವು ಅಥಾವ ಸೆಟೆದು ಕೊಳ್ಳುವಿಕೆ ನಿಮ್ಮ ದಿನಚರಿಗಳಾದ ನಡೆ, ಮೆಟ್ಟಿಲು ಹತ್ತುವುದು, ಸಾಧಾರಣ ಕೆಲಸಗಳನ್ನು ಮಾಡುವುದು, ಕ್ರೀಡೆಗಳನ್ನು ಆಡುವುದು, ಸುಲಭವಾಗಿ ಮಾಡಬೇಕಾದ ಕೆಲಸಗಳನ್ನು ಸಹ ಮಾಡದಂತೆ ಬಾಧಿಸುತ್ತದೆ. ಆದ್ದರಿಂದಲೇ 'ಈ ಸ್ಥಿತಿಯ ಬಗ್ಗೆ, ಅದು ಹೇಗೆ ನಮ್ಮನ್ನು ಬಾಧಿಸುತ್ತದೆ. ಅದರ ಜೊತೆ ಬಾಳುವುದು ಹೇಗೆ' ಮುಂತಾದುವುಗಳ ಬಗ್ಗೆ ತಿಳಿದುಕೊಳ್ಳಬೇಕು. ಈ ವಿಧಾನವನ್ನೇ ಸ್ಟೈಲ್ ಮೇನೇಜ್‌ಮೆಂಟ್ ಎನ್ನುತ್ತಾರೆ.


## ಮಂಡಿಯ ಆಸ್ಟಿಯೋಆರ್ತರಿಟಿಸ್‌ಗೆ ಚಿಕಿತ್ಸಾ ವಿಧಾನಗಳು

ಮಂಡಿ ಆಸ್ಟಿಯೋಆರ್ತರಿಟೀಸ್‌ಗೆ ಪ್ರಾಥಮಿಕವಾಗಿ ಚಿಕಿತ್ಸೆ ಮಾಡುವುದು – ನೋವನ್ನು ಬಿಡಿಸಿ, ಚಲನವನ್ನು ತರುವುದು, ಈ ವಿಧಾನದಲ್ಲಿ ಮಾಡುವ ಪ್ರಾಥಮಿಕ ಚಿಕಿತ್ಸೆ ದೇಹದ ತೂಕವನ್ನು ಇಳಿಸುವುದು, ವ್ಯಾಯಾಮ, ನೋವನ್ನು ಕಡಿಮೆ ಮಾಡುವ ಔಷಧ ಸೇವನೆ, ಫಿಜಿಯೋ ಥೆರಪಿ. ಇವುಗಳನ್ನು ನೀಡಿದ ನಂತರವೂ ನಿಮ್ಮ ನಡೆ ಕಷ್ಟವಾಗಿದ್ದರೆ. ಆಗ ವೈದ್ಯರು ನಿಮಗೆ ಪೂರ್ತಿ ಮಂಡಿ ಬದಲಾವಣೆ ಶಸ್ತ್ರ ಚಿಕಿತ್ಸೆ (ಟೋಟಲ್ ನೀ ರೀಪ್ಲೇಸ್‌ಮೆಂಟ್ ಸರ್ಜರಿ) (TKR) ಅನ್ನು ಸೂಚಿಸುತ್ತಾರೆ.

# ಟೋಟಲ್ ನೀ ರೀಪ್ಲೇಸ್‌ಮೆಂಟ್ (TKR) ಅಂದರೆ ಏನು?

ಇದನ್ನೇ ಟೋಟಲ್ ನೀ ಆರ್ಥ್ರೋಪ್ಲಾಸ್ಟಿ (TKA) ಎನ್ನುತ್ತಾರೆ. ಇದರಲ್ಲಿ ಸವೆದ ಪ್ರದೇಶಗಳನ್ನು ಕೃತಕ ಮಂಡಿ ಜಾಯಿಂಟ್‌ಗಳಿಂದ ಬದಲಾಯಿಸಿ ಸಾಧಾರಣ ಮಂಡಿಯಂತೆ ನಡೆಯಲು ಸಾಧ್ಯವಾಗುವಂತೆ ಮಾಡುತ್ತಾರೆ.

## ಮಂಡಿ ಬದಲಾವಣೆ ಶಸ್ತ್ರ ಚಿಕಿತ್ಸೆ ಯಾರಿಗಾಗಿ?


ಸಾಧಾರಣ ಮಂಡಿ ಬಾಧಿತ ಮಂಡಿ

ಮಂಡಿ ಆಸ್ಟಿಯೋಆರ್ಥರೈಟೀಸ್ ಸಮಸ್ಯೆಯಿರುವ ರೋಗಿಗಳಿಗೆ ಈ ಶಸ್ತ್ರ ಚಿಕಿತ್ಸೆ ನಡೆಯುತ್ತದೆ. ಈ ರೋಗಿಗಳಿಗೆ ನೋವು ತಡೆದುಕೊಳ್ಳಲಾಗದಿದ್ದರೆ, ಅಂಗಗಳ ವಿರೂಪತೆ ತೀವ್ರವಾದಾಗ, ರೋಗಿಗಳ ದಿನಚರಿ ತೀವ್ರವಾಗಿ ಬಾಧಿಸಲ್ಪಟ್ಟಾಗ ಈ ಶಸ್ತ್ರ ಚಿಕಿತ್ಸೆ ಅಗತ್ಯವಾಗುತ್ತದೆ.

## ಈ ಮಂಡಿ ಬದಲಾವಣೆ ಶಸ್ತ್ರಚಿಕಿತ್ಸೆಯ ಪ್ರಯೋಜನಗಳೇನು ?

ಈ ಶಸ್ತ್ರ ಚಿಕಿತ್ಸೆಯ ಪ್ರಥಮ ಪ್ರಯೋಜನ ನೋವಿನಿಂದ ಬಿಡುಗಡೆ ಇದು ಅಂಗಗಳ ವಿರೂಪತೆಯನ್ನು ಹೋಗಲಾಡಿಸಿ, ಕೀಲಿನ ಸ್ಥಿರತೆಯನ್ನು ಉಳಿಸಿ, ಚಲನವನ್ನು ಸರಳವಾಗಿಸುತ್ತದೆ.

ಶಸ್ತ್ರಚಿಕಿತ್ಸೆಯ ನಂತರ ಮಂಡಿ ಬಗ್ಗುವಿಕೆ ಯಶಸ್ವಿಯಾಗುವುದು ಎಲುಬಿನ ಗುಣಮಟ್ಟ, ಅದರ ಹೊಂದಾಣಿಕೆ, ಸ್ಥೂಲದೇಹ ಸಂಧಿಬಂಧನ (ಲಿಗಮೆಂಟ್)ಗಳ ದೃಢತೆಯ ಮೇಲೆ ಆಧಾರವಾಗಿರುತ್ತದೆ. ಅಷ್ಟೇ ಅಲ್ಲ ಇದು ಬಳಸಿದ ಶಸ್ತ್ರ ಚಿಕಿತ್ಸೆಯ ವಿಧಾನ ಹಾಗೂ ಫಿಜಿಯೋತೆರಪಿಯ ಮೇಲೂ ಆಧಾರವಾಗಿರುತ್ತದೆ.

## ದೈನಂದಿನ ಕಾರ್ಯಾಚರಣೆಗಳಲ್ಲಿ ನಾವು ಯಾವ ರೀತಿಯ ಸುಧಾರಣೆಗಳನ್ನು ನಿರೀಕ್ಷಿಸಬಹುದು ?

ಮಂಡಿಯ ಬದಲಾವಣೆ ಶಸ್ತ್ರ ಚಿಕಿತ್ಸೆ ಮಾಡಿಕೊಂಡ ನಂತರ ಹೆಚ್ಚಿನ ರೋಗಿಗಳು ತಮ್ಮ ದೈನಂದಿನ ಕಾರ್ಯಾಚರಣೆಗಳನ್ನು ಎಂದಿನಂತೆಯೇ ಮಾಡಬಹುದು. ಹೆಚ್ಚಿನವರು ಊರು ಗೋಲಿನ ಸಹಾಯವಿಲ್ಲದೇ ನಡೆಯಬಹುದಾದದರೂ, ತುಂಬಾ ವಯಸ್ಸಾದವರು ಆಧಾರಕ್ಕಾಗಿ ಅದನ್ನು ಬಳಸಬಹುದು. ರೋಗಿಗಳು ಮೆಟ್ಟಿಲುಗಳನ್ನು ಹತ್ತುವುದು, ಖುರ್ಚಿಗಳಲ್ಲಿ ಕುಳಿತು ಕೊಳ್ಳುವುದು ಸ್ವತಂತ್ರವಾಗಿ ಮಾಡಬಹುದು.

## ಶಸ್ತ್ರ ಚಿಕಿತ್ಸೆಯ ನಂತರ ರೋಗಿ ಎಷ್ಟು ದಿನಗಳು ಆಸ್ಪತ್ರೆಯಲ್ಲಿರಬೇಕು ?

ಸಾಧಾರಣವಾಗಿ ರೋಗಿ ಮಂಡಿ ಬದಲಾವಣೆ ಚಿಕಿತ್ಸೆಯ ನಂತರ 3 ರಿಂದ 5 ದಿನಗಳು ಆಸ್ಪತ್ರೆಯಲ್ಲಿರಬೇಕಾಗುತ್ತದೆ.

## ರಕ್ತದಾನಕ್ಕಾಗಿ ಏರ್ಪಾಡು ಮಾಡಿಕೊಳ್ಳಬೇಕೇ?

ಸಾಧಾರಣವಾಗಿ ಮಂಡಿ ಬದಲಾವಣೆಯ ಶಸ್ತ್ರ ಚಿಕಿತ್ಸೆಗೆ ಹೊಸ ರಕ್ತ ಬೇಕಾಗುವುದಿಲ್ಲ. ಅಪರೂಪವಾದ ಶಸ್ತ್ರ ಚಿಕಿತ್ಸೆಯ ವಿಷಯದಲ್ಲಿ ಹೊಸ ರಕ್ತ ಬೇಕಾಗಿದ್ದರೆ ಅದನ್ನು ವೈದ್ಯರು ಮುಂಚಿತವಾಗಿಯೇ ತಿಳಿಸಿದಾಗ, ಆಸ್ಪತ್ರೆಯವರು ಅದಕ್ಕೆ ಏರ್ಪಾಡು ಮಾಡುತ್ತಾರೆ.

## ಶಸ್ತ್ರ ಚಿಕಿತ್ಸೆಯ ನಂತರ ರೋಗಿ ಎಷ್ಟು ಕಾಲ ಫಿಜಿಯೋ ಥೆರಪಿಯನ್ನು ಮುಂದುವರೆಸಬೇಕು?

ಶಸ್ತ್ರ ಚಿಕಿತ್ಸೆಯ ನಂತರ ರೋಗಿ ಕನೀಸವಾಗಿ 10 ದಿನಗಳ ಕಾಲ ಪುನರ್ವಸತಿ ಕೇಂದ್ರದಲ್ಲಿ ಅಥವಾ ಮನೆಯಲ್ಲಿ ಫಿಜಿಯೋಥೆರಪೀ ಪಡೆಯಬೇಕು. ನಂತರ ಫಿಜಿಯೋ ಥೆರಪಿಸ್ಟ್ ನಿಮಗೆ ಹೊರರೋಗಿಯಾಗಿ ಒಂದೆರಡು ತಿಂಗಳ ಕಾಲ, ಫಿಜಿಯೋಥೆರಪಿ ಪಡೆಯುವಂತೆ ಸೂಚಿಸಬಹುದು.

## ಪೂರ್ತಿಯಾಗಿ ಚೇತರಿಸಿಕೊಳ್ಳಲು ಎಷ್ಟು ಸಮಯ ಬೇಕಾಗುತ್ತದೆ?

ಸಂಪೂರ್ಣವಾಗಿ ಚೇತರಿಸಿಕೊಳ್ಳಲು 2 ಅಥವಾ 3 ತಿಂಗಳು ಬೇಕಾಗುತ್ತದೆ. ನಂತರ ವೈದ್ಯರ ಸಲಹೆಯಂತೆ ನೀವು ಕ್ರೀಡೆಗಳನ್ನು ಆಡುವುದು, ಸೈಕಲನ್ನು ಸವಾರಿ ಮಾಡುವುದು, ಈಜುವುದು, ಕಾರ್ ಅನ್ನು ಓಡಿಸುವುದು, ಲೈಂಗಿಕ ಚರ್ಯೆಯಲ್ಲಿ ಭಾಗವಹಿಸುವುದು – ಮುಂತಾದುವು ಮಾಡಬಹುದು.



ಬಾಧಿತ ಮಂಡಿ



ಬದಲಾವಣೆ ಮಾಡಿದ ಮಂಡಿ

## ಮಂಡಿ ಬದಲಾವಣೆಯ ಶಸ್ತ್ರಚಿಕಿತ್ಸೆಯ ನಂತರ ಅನುಸರಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳು ಯಾವುವು?

ಮಂಡಿ ಬದಲಾವಣೆಯ ಶಸ್ತ್ರ ಚಿಕಿತ್ಸೆಯ ನಂತರ ಸಾಹಸಕಾರ್ಯಗಳು ಎನಿಸಿಕೊಳ್ಳುವ ಧುಮುಕುವುದು, ಓಡುವುದು ಮುಂತಾದುವನ್ನು ನಿಷೇಧಿಸಬೇಕು ಯಾಕೆಂದರೆ ಇಂಥಾ ಚಟುವಟಿಕೆಗಳು ಕೃತಕ ಮಂಡಿಯ ಮೇಲೆ ಪ್ರಭಾವಬೀರಿ ಅವುಗಳ ದೀರ್ಘಕಾಲದ ಬಾಳಿಕೆಯನ್ನು ಮೊಟುಕುಗೊಳಿಸಬಹುದು. ವೆಸ್ಟರ್ನ್ ಶೌಚಾಲಯವನ್ನು ಬಳಸುವುದು ಉತ್ತಮ ದೈನಂದಿನ ಚಟುವಟಿಕೆಗಳಿಗೆ ಅನುಸರಿಸಬೇಕಾದ ಮಾರ್ಗದರ್ಶನ ಹಾಗೂ ವಿಧಾನಗಳನ್ನು ಕುರಿತು ನಿಮ್ಮ ಫಿಜಿಯೋ ಥೆರಪಿಸ್ಟ್‌ನ ಸಲಹೆಗಳನ್ನು ಪಡೆಯಿರಿ.

## ಈ ಹೊಸ ಮಂಡಿ ಎಷ್ಟು ಕಾಲ ನಿಲ್ಲುತ್ತದೆ?

ಇಂದಿನ ಕಾಲದ ಮಂಡಿಗಳು 25 ವರ್ಷಗಳು ಅಥವಾ ಅದಕ್ಕಿಂತ ಹೆಚ್ಚಿನ ಕಾಲ ಉಳಿಯುತ್ತದೆ. ಆದರೂ ಅವುಗಳ ಬಾಳಿಕೆ ಎಲುಬಿನ ಗುಣಮಟ್ಟ, ದೇಹದ ತೂಕ, ಶಸ್ತ್ರ ಚಿಕಿತ್ಸೆಯ ನಂತರ ರೋಗಿಯ ಜೀವನ ವಿಧಾನಗಳ ಮೇಲೆ ಆಧಾರವಾಗಿರುತ್ತದೆ.

# ಆಲ್ಟಿಯಸ್™

# ಬ್ಯೂಚೆಲ್-ಪಪ್ಪಾಸ್™

**ಮೊಬೈಲ್ ಬೇರಿಂಗ್ ನೀ ರೀಪ್ಲೇಸ್‌ಮೆಂಟ್ ವಿಧಾನ**

ಇದನ್ನು 3ನೇ ಜನರೇಷನ್ ನ್ಯೂ ಜರ್ಸಿ ನೀ ಎಂದು ಕೂಡಾ ಹೇಳುತ್ತಾರೆ.



ಈ ವಿಧಾನವನ್ನು ಸಂಯುಕ್ತವಾಗಿ ಅಭಿವೃದ್ಧಿ ಪಡಿಸಿದವರು


**ಡಾ|| ಫ್ರೆಡೆರಿಕ್ ಎಫ್. ಬ್ಯೂಚೆಲ್**
ಜಾಯಿಂಟ್ ರೀಪ್ಲೇಸ್‌ಮೆಂಟ್ ಕ್ಷೇತ್ರದಲ್ಲಿ
ಅತ್ಯಾಧುನಿಕ ಎಲುಬಿನ ವೈದ್ಯ,
ಸಂಶೋಧಕ ಮತ್ತು ಡೆವಲಪರ್

&

**ಡಾ|| ಮೈಖೇರ್ ಜೆ. ಪಪ್ಪಾಸ್**
ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ
ಪ್ರೊಫೆಸರ್ ಹಾಗೂ ಆಧುನಿಕ ಡಿಜೈನ್‌ನಲ್ಲಿ
ಅಂತರ್ರಾಷ್ಟ್ರೀಯವಾಗಿ ಹೆಸರು ಪಡೆದ ತಜ್ಞರು.

ನ್ಯೂ ಜರ್ಸಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜೀ





# ಆಲ್ಟಿಯಸ್™
# ಬ್ಯೂಚೆಲ್-ಪಪ್ಪಾಸ್™

**ಮೊಬೈಲ್ ಬೇರಿಂಗ್ ನೀ ರೀಪ್ಲೇಸ್‌ಮೆಂಟ್ ವಿಧಾನ**

3ನೇ ಜನರೇಷನ್ ನ್ಯೂ ಜರ್ಸಿ ನೀ

## ಹೈ ಫ್ಲೆಕ್ಸ್ ಡಿಜೈನ್

- ಅತ್ಯಧಿಕ ಚಾಲನೆ 162 ಡಿಗ್ರಿಯವರೆಗೆ

## ಅತಿ ಕಡಿಮೆ ಆಳತೆಗೆ ಎಲುಬಿನ ಕತ್ತರಿಸುವಿಕೆ

- ಅಪ್ಪಟವಾದ ಸಹಜ ಎಲುಬನ್ನು ಉಳಿಸಿಕೊಳ್ಳುತ್ತೆ

## ಟಿಬಿಯಲ್ ಸ್ಟಾಪರ್ ಪಿನ್

- ಡಿಸ್‌ಲೊಕೇಷನ್ ಇಲ್ಲ
- ಡಿಸ್‌ಲೊಕೇಷನ್‌ಗಾಗಿ ರಿವಿಜನ್ ಶಸ್ತ್ರಚಿಕಿತ್ಸೆಗೆ ಅಪರೂಪವಾದ ಅವಕಾಶ

## ಸೂಕ್ಷ್ಮವಾದ ಏಕರೂಪತೆ & ಎಂಗೇಜ್‌ಮೆಂಟ್

- ಗರಿಷ್ಠವಾದ ಸ್ಥಿರತೆ

## ಲೋ ಕಾಂಟಾಕ್ಟ್ ಒತ್ತಡ

- ಅತ್ಯಧಿಕ ಬಾಳಿಕೆ

## ಮೊಬೈಲ್ ಬೇರಿಂಗ್

- ಯುವ ಮತ್ತು ವೃದ್ಧ ರೋಗಿಗಳಿಗೆ ಗರಿಷ್ಠವಾದ ಚುರುಕಾದ ಮತ್ತು ಜೀವನ ಸೌಕರ್ಯ
- ಪದ್ಮಾಸನ ಹಾಕಿಕೊಳ್ಳಬಹುದು



ALTIUS™
BUECHEL-PAPPAS™
REGULAR



ALTIUS™
BUECHEL-PAPPAS™
GOLD

ಅರ್ಪಿಸಿದವರು

EDUCATION CELL
BUECHEL-PAPPAS™

TTK ಹೆಲ್ತ್‌ಕೇರ್ ಲಿಮಿಟೆಡ್, ಆರ್ಥೋ ಡಿವಿಷನ್
ಶ್ರೇಷ್ಠ ಪಿನಾಕಲ್, ನಂ. 39, ಆಲಿವರ್ ರೋಡ್, ಮೈಲಾಪುರ್, ಚೆನ್ನೈ – 600 004. ಫೋನ್: 044–24980532 / 24990343

ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಈ ವೆಬ್‌ಸೈಟ್ ಅನ್ನು ನೋಡಿ **www.buechelpappas.com**

rhfactor.co.in